**OS No. 104/2017**
**PW-1**

ಸಾಕ್ಷಿಯನ್ನು ದಿಃ **22.12.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ

ನನ್ನ ತಂದೆ ಸರ್ಕಾರಿ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ಅವರ ಅಂತಿಮ ಕ್ರಿಯ ದೊಡ್ಡ ಹುಂಡಿ ಗ್ರಾಮದಲ್ಲಿ ಮಾಡಿರುತ್ತೇವೆ. ಪ್ರತಿವಾದಿ ದೊಡ್ಡ ಹುಂಡಿ ಗ್ರಾಮದಲ್ಲಿ ವಾಸ ಇದ್ದಾರೆ. ಪ್ರತಿವಾದಿ ದೊಡ್ಡ ಹುಂಡಿ ಗ್ರಾಮದಲ್ಲೆ ವಾಸ ಇದ್ದುದರಿಂದ ನನ್ನ ತಂದೆಯ ಅಂತಿಮ ಕ್ರಿಯ ಪ್ರತಿವಾದಿಯೇ ತಮ್ಮ ಮನೆಯಲ್ಲಿ ಮಾಡಿರುತ್ತಾರೆ ಎಂದರೆ ಸರಿ. ನಾನು ಮಾದಾಪುರದ್ಲಿ ವಾಸ ಇದ್ದೇನೆ ನನಗೆ ಸೇರಿದ ಜಮೀನು ಮಾದಪುರದೇಳಿ **6** ಗುಂಟೆ ಇದೆ ಎಂದರೆ ಸರಿ. ನನ್ನ ತಾಯಿಯ ಹೆಸರು ಬಸಮ್ಮ. ಅವರು ನನ್ನ ಮತ್ತು ಪ್ರತಿವಾದಿಯ ಜೊತೆ ವಾಸ ಇದ್ದಾರೆ. ಈಗ ದೊಡ್ಡ ಹುಂಡಿ ಗ್ರಾಮದಲ್ಲಿ ವಾಸ ಇದ್ದಾರೆ. ನನ್ನ ತಂದೆ ತೀರಿಕೊಳ್ಳುವ ಪೂರ್ವದಲ್ಲಿ ಸಹ ನನ್ನ ತಾಯಿ ಪ್ರತಿವಾದಿಯ ಜೊತೆ ವಾಸ ಇದ್ದರು ಎಂದರೆ, ಸಾಕ್ಷಿಯು ಮುಂದುವರೆದು ಇಬ್ಬರ ಜೊತೆಯಲ್ಲೂ ವಾಸ ಇದ್ದರು ಎಂದು ನುಡಿಯುತ್ತಾರೆ. ಈಗ **5** ವರ್ಷಗಳಿಂದ ದೊಡ್ಡ ಹುಂಡಿಯಲ್ಲಿ ವಾಸ ಇದ್ದಾರೆ. ನನ್ನ ತಂದೆ ಹುಷಾರಿಲ್ಲದ ಕಾರಣ ಸಾಯುವ ಪೂರ್ವದಲ್ಲಿ ದೊಡ್ಡ ಹುಂಡಿ ಗ್ರಾಮದಲ್ಲೇ ನನ್ನ ತಾಯಿ ಜೊತೆ ವಾಸ ಇದ್ದರು ಆದರೂ ಸಹ ಇತ್ತೀಚೆಗೆ **5** ವರ್ಷಗಳಿಂದ ಪ್ರತಿವಾದಿಯ ಜೊತೆ ವಾಸ ಇರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಅಂತಿಮ ಕ್ರಿಯೇ ಖರ್ಚಿಗಾಗಿ **23,000/-** ರೂಪಾಯಿಗಳನ್ನು ಖರ್ಚು ಮಾಡಿರುತ್ತೇನೆ. ಸದರಿ ಖರ್ಚಿನ ಹಣವನ್ನು ನನ್ನ ತಮ್ಮನ ಕೈಗೆ ಕೊಟ್ಟಿರುತ್ತೇನೆ ಅದನ್ನು ನೀಡುವಾಗ ಯಾವುದೇ ಸಾಕ್ಷಿಯು ಹಾಜರು ಇರಲಿಲ್ಲ. ಆ ರೀತಿ ನಾನು ಯಾವುದೇ ಹಣವನ್ನು ಅಂತಿವ ಕ್ರಿಯೆಗಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಔಷದಿ ಖರ್ಚುಗಳನ್ನು ಮಾಡಿರುವುದಾಗಿ ಹೇಳಿರುತ್ತೇನೆ ಆ ಸಂಬಂದ ಆಸ್ಪತ್ರೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಮುಂದುವರೆದು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ

ಕೊಡಿಸಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಯನ್ನು ನಮ್ಮ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿ ಖರೀದಿ ಮಾಡಿರುತ್ತೇವೆ. ಯಾವ ಪಿತ್ರಾರ್ಜಿತ ಆಸ್ತಿಯನ್ನು ಮಾರಾಟ ಮಾಡಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು, ನನ್ನ ತಂದೆ ಮತ್ತು ಪ್ರತಿವಾದಿ ಮೂರು ಜನ ಸೇರಿ ಆಸ್ತಿಯನ್ನು ಕರಿಗೇಗೌಡ ಅವರಿಗೆ ಮಾರಾಟ ಮಾಡಿ ಸಾಲ ತೀರಿಸಿ ಉಳಿಕೆ ಹಣದಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ಸದರಿ ದಾಖಲೆಯನ್ನು ಮುಂದೆ ಹಾಜರು ಪಡಿಸುತ್ತೇನೆ. ದಾವಾ ಆಸ್ತಿ **25.05.1995** ನೇ ಇಸವಿಯಲ್ಲಿ ದೊಡ್ಡ ಹುಂಡಿ ಗ್ರಾಮದ ಬಸವಯ್ಯ ಅವರಿಂದ ನನ್ನ ತಂದೆ ಸ್ವಯಾರ್ಜಿತವಾಗಿ ಖರೀದಿ ಮಾಡಿದ ಆಸ್ತಿ ಎಂದರೆ, ಸಾಕ್ಷಿಯು ಮುಂದುವರೆದು ನಾವು ಸಾಲ ಮಾಡಿ ಖರೀದಿ ಮಾಡಿರುವ ಆಸ್ತಿ ಎಂದು ನುಡಿಯುತ್ತಾರೆ. ಪ್ರತಿವಾದಿಯು ನನ್ನ ತಂದೆ ಮತ್ತು ತಾಯಿಯ ಯೋಗ ಕ್ಷೇಮಗಳನ್ನು ನೋಡಿಕೊಳ್ಳುತ್ತಿದ್ದ ಕಾರಣ ನನ್ನ ತಂದೆ ಪ್ರತಿವಾದಿ ಪರವಾಗಿ ನೊಂದಾಯಿತ ಮರಣ ಶಾಸನವನ್ನು ದಿನಾಂಕಃ **06.10.2015** ರಂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಈಗಲೂ ಸಹ ಪ್ರತಿವಾದಿಯ ಸ್ವಾಧೀನದಲ್ಲಿ ಇದೆ ಮತ್ತು ಖಾತೆ ಅವರ ಹೆಸರಿಗೆ ಬದಲಾಗಿದೆ ಎಂದರೆ ಸರಿಯಲ್ಲ. ಸದರಿ ವಿಲ್ಲು ನಾಮೆಯಂತೆ ಪ್ರತಿವಾದಿಯ ಹೆಸರಿಗೆ ಕ್ರಮಬದ್ಧವಾಗಿ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನ್ನ ಸ್ವಾಧೀನದಲ್ಲಿ ಇದೆ ಎಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಈಗಲೂ ಸಹ ಆರ್ ಟಿ ಸಿ ಯಲ್ಲಿ ಪ್ರತಿವಾದಿಯ ಹೆಸರು ಬರುತ್ತಿದೆ ಎಂದರೆ ಸರಿ. ಕಬ್ಬು ಖರೀದಿ ಮಾಡುವಾಗ ಶುಗರ್ ಕಾರ್ಖಾನೆಯವರು ಆರ್ ಟಿ ಸಿ ಪ್ರತಿ ಪಡೆದು ಅಗ್ರಿಮೆಂಟ್ ಮಾಡಿಸುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ಆರ್ ಟಿ ಸಿಯನ್ನು ನೀಡಿರುವುದಾಗಿ ಎಂದು ನುಡಿಯುತ್ತಾರೆ.

ನಿಪಿ-**1** ಮತ್ತು **2** ದಾಖಲೆಯಲ್ಲಿ ಆಸ್ತಿಯ ವಿಸ್ತೀರ್ಣ ನಮೂದು ಆಗಿಲ್ಲ. ನಿಪಿ-**1** ಮತ್ತು **2** ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ-**3** ರಲ್ಲಿ ವಿಸ್ತೀರ್ಣ ಮತ್ತು ಸರ್ವೆ ನಂಬರ್ ನಮೂದು ಆಗಿರುವುದಿಲ್ಲ ಎಂದರೆ ಸಾಕ್ಷಿಯು ಮುಂದುವರೆದು ಸದರಿ ನಮೂದುಗಳನ್ನು ಸಕ್ಕರೆ ಕಾರ್ಖಾನೆಯವರು ಸರ್ವೆ ನಂಬರ್ ಮತ್ತು ವಿಸ್ತೀರ್ಣವನ್ನು ತೆಗೆದುಕೊಳ್ಳುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಹೇಳಿಕೆಯ ಮೇಲೆ ಕಾರ್ಖಾನೆಯವರು ಕರಾರನ್ನು ಮಾಡುತ್ತಾರೆ ಎಂದರೆ ಸರಿ. ನಿಪಿ-**6** ರ ಪ್ರಕಾರ ಖಾತೆ ಬದಲಾವಣೆ ಮಾಡಿರುವುದಿಲ್ಲ, ಕಾರಣ ಹುಷಾರು ತಪ್ಪಿದ್ದರಿಂದ ತಡವಾಗಿರುತ್ತದೆ. ಖಾತೆ ಬದಲಾವಣೆಗಾಗಿ ಅರ್ಜಿ ನೀಡಬೇಕೆಂದು ನನಗೆ ಗೊತ್ತಿರುವುದಿಲ್ಲ. ನಾನು ಆಸ್ತಿಗಳನ್ನು ವಿಭಾಗ ಮಾಡಿಕೊಂಡು **16** ವರ್ಷ ಆಯಿತು. ಯಾವ ದಿನಾಂಕ ಎಂದು ಹೇಳಲು ಆಗುವುದಿಲ್ಲ. ನನ್ನ ತಂದೆ ಹುಷಾರಿಲ್ಲದ ಸಮಯದಲ್ಲಿ ಪ್ರತಿವಾದಿ ತಂದೆಯನ್ನು ಕರೆದುಕೊಂಡು ಹೋಗಿ ತನ್ನ ಪರವಾಗಿ ದಾಖಲೆ ಬರೆಸಿಕೊಂಡು ಖಾತೆ ಮಾಡಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡು **5** ವರ್ಷ ಆಗಿರುತ್ತದೆ. ನನ್ನ ತಂದೆ ಜೀವಂತವಾಗಿ ಇದ್ದಾಗ ಖಾತಾ ಬದಲಾವಣೆಗೆ ಅರ್ಜಿ ಕೊಟ್ಟಿರಲಿಲ್ಲ. ನನ್ನ ತಂದೆಯ ಮೇಲೆ ಇದ್ದ ನಂಬಿಕೆಯ ಮೇರೆಗೆ ನನ್ನ ತಂದೆಯನ್ನು ಕೇಳಿರುವುದಿಲ್ಲ. ನಿಪಿ-**6** ದಾಖಲೆಯನ್ನು ನಾವು ಸೃಷ್ಟಿ ಮಾಡಿರುವ ಕಾರಣ ತಂದೆಯ ಮರಣ ನಂತರ ಖಾತೆ ಬದಲಾವಣೆ ಮಾಡಿಕೊಳ್ಳಬಹುದು ಎಂದು ಮುಂಚೆ ಅರ್ಜಿ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-**6** ದಾಖಲೆಯ ಆದ ಸಂದರ್ಭದಲ್ಲಿ ನನ್ನ ತಮ್ಮನಿಗೆ ಮದುವೆ ಆಗಿರಲಿಲ್ಲ. ಮದುವೆ ಆಗಿಲ್ಲದ ಕಾರಣ ಆಗ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-**6** ವಿಭಾಗ ಪತ್ರ ಆದ ಸಂದರ್ಭದಲ್ಲಿ ನನ್ನ ಚಿಕ್ಕಪ್ಪ ನಿಂಗಪ್ಪ, ಪುಟ್ಟಸ್ವಾಮಿ, ಶಿವಲಿಂಗಪ್ಪ, ಚಿಕ್ಕಪ್ಪ ಮಲ್ಲಿಕಾರ್ಜುನಪ್ಪ ಮತ್ತು ಅವರ ಮಕ್ಕಳು ಮತ್ತು ದೊಡ್ಡಪ್ಪನ ಮಕ್ಕಳು ಇದ್ದರು. ಅದೇ ದಿನ ನಿಪಿ-**6** ದಾಖಲೆಗೆ ಎಲ್ಲರೂ ಸಹಿ ಮಾಡಿರುತ್ತೇವೆ. ಸಂಜೆ **5.00-6.00** ಗಂಟೆ ಸಮಯದಕಲ್ಲಿ ಸೇರಿರುತ್ತೇವೆ. ಒಂದೇ ದಿನ ನಾವೆಲ್ಲರೂ ಸೇರಿ ಸಹಿ ಮಾಡಿರುತ್ತೇವೆ. ನಿಪಿ-**6** ದಾಖಲೆಗೆ ಲಿಂಗಪ್ಪ, ಗುರುಸ್ವಾಮಿ, ನಾನು, ನನ್ನ ತಮ್ಮ ಮತ್ತು ನನ್ನ ತಂದೆ ನಿಪಿ-**6** ರಲ್ಲಿ ಸಹಿ ಮಾಡಿರುತ್ತೇವೆ. ಆ ಸಂಜೆ **7.00** ಸಮಯದಲ್ಲಿ ಮಾತುಕತೆ ಮುಗಿದಿರುತ್ತದೆ. ಮೊದಲು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಲ್ಲರೂ ನನ್ನ ಮುಂದೆ ಸಹಿ ಮಾಡಿರುತ್ತಾರೆ. ಮಾತುಕತೆ ಆದ ನಂತರ ನನ್ನ ತಂದೆ ಪತ್ರ ತರಿಸಿರುತ್ತಾರೆ. ನನ್ನ ತಂದೆಯವರ ಹೇಳಿಕೆಯ

ಮೇರೆಗೆ ಪತ್ರ ತಯಾರು ಮಾಡಿರುತ್ತಾರೆ. ಪತ್ರ ನಮ್ಮ ಮನೆಯಲ್ಲೆ ತಯಾರಿ ಮಾಡಿರುತ್ತಾರೆ. ನನ್ನ ತಂದೆ ಮತ್ತು ನನ್ನ ತಮ್ಮ ಅನಕ್ಷರಸ್ಥರು ಎಂದರೆ ನನ್ನ ತಮ್ಮ **2** ನೇ ತರಗತಿ ಓದಿರುತ್ತಾನೆ. ನನ್ನ ತಮ್ಮ ಮತ್ತು ನನ್ನ ತಂದೆಗೆ ಬೆರಳಚ್ಚು ಮಾಡಲು ಬರುವುದಿಲ್ಲ ಎಂದರೆ ಸರಿ. ನನ್ನ ತಂದೆಯವರು ನಿಪಿ-**6** ದಾಖಲೆಯನ್ನು ತಯಾರು ಮಾಡಿಕೊಂಡು ಬಂದಿರುತ್ತಾರೆ. ಸದರಿ ದಾಖಲೆಯನ್ನು ಮಾರನೇ ದಿವಸ ನನ್ನ ತಂದೆ ನಮಗೆ ಕೊಟ್ಟಿರುತ್ತಾರೆ. ದಾಖಲೆಯನ್ನು ಕೊಡುವಾಗ ನಾನು ಮನೆಯಲ್ಲೆ ಇದ್ದೆ. ಆಗ ನಾನು ಮತ್ತು ನನ್ನ ತಂದೆ ಮಾತ್ರ ಮನೆಯಲ್ಲಿ ಇದ್ದೆವು. ನಿಪಿ-**6** ದಾಖಲೆಗೆ ಯಾರ್ಯಾರು ಸರಿ ಮಾಡಿರುತ್ತಾರೆ ಎಂದು ನಾನು ನಿಖರವಾಗಿ ನೋಡಿರುವುದಿಲ್ಲ ಎಂದರೆ ಸರಿ. ನನ್ನ ತಂದೆ ಯಾರ ಮುಖಾಂತರ ಬೆರಳಚ್ಚು ಮಾಡಿಸಿ ತಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ-**6** ದಾಖಲೆಯನ್ನು ನಾನು ಮತ್ತು ಸಾಕ್ಷಿದಾರರು ಸೇರಿಕೊಂಡು ಒಳಸಂಚು ಮಾಡಿ ನನ್ನ ತಂದೆಯಿಂದ ಬೆಳೆ ಪರಿಹಾರ ಪಡೆಯಲು ಅರ್ಜಿಯನ್ನು ಕೇಳಿ ಸಹಿ ಪಡೆದು ಸೃಷ್ಟಿ ಮಾಡಿರುವ ದಾಖಲೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-**7** ದಾಖಲೆಯಲ್ಲಿ **1** ನೇ ಪುಟದ **9** ನೇ ಕಲಂನಲ್ಲಿ ನಮೂದಾಗಿರು ಬಸವರಾಜು ಬಿನ್ ಮಲ್ಲಪ್ಪ ಮತ್ತು ಸುರೇಶ ಬಿನ್ ಮಲ್ಲಪ್ಪ ಎಂಬುವರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿಯವರು ಮೈಸೂರು ಮಲ್ಲಪ್ಪ ಅವರ ಕುಟುಂಬಕ್ಕೆ ಸೇರಿದವರು ಎಂದರೆ ಸರಿ. ಅದೇ ರೀತಿ **3** ನೇ ಪುಟದಲ್ಲಿ ಸುರೇಶ ಬಿನ್ ಮಲ್ಲಪ್ಪ ಎಂಬ ಹೆಸರು ನಮೂದಾಗಿರುವುದು ನನ್ನ ತಮ್ಮ ಎಂದರೆ ಸರಿ.ನಿಪಿ-**14** ದಾಖಲೆಯಲ್ಲಿ **1** ನೇ ಪುಟದ **9** ನೇ ಕಲಂನಲ್ಲಿ ನಮೂದಾಗಿರು ಬಸವರಾಜು ಬಿನ್ ಮಲ್ಲಪ್ಪ ಮತ್ತು ಸುರೇಶ ಬಿನ್ ಮಲ್ಲಪ್ಪ ಎಂದು ನಮೂದಾಗಿದೆ, ಸದರಿಯವರು ಮೈಸೂರು ಮಲ್ಲಪ್ಪ ಅವರ ಕುಟುಂಬಕ್ಕೆ ಸೇರಿದವರು ಎಂದರೆ ಸರಿ. ಅದೇ ರೀತಿ **3** ನೇ ಪುಟದಲ್ಲಿ ಸುರೇಶ ಬಿನ್ ಮಲ್ಲಪ್ಪ ಎಂಬ ಹೆಸರು ನಮೂದಾಗಿರುವುದು ನನ್ನ ತಮ್ಮ ಎಂದರೆ ಸರಿ. ನಿಪಿ-**15** ದಾಖಲೆಯಲ್ಲಿ **1** ನೇ ಪುಟದ **9** ನೇ ಕಲಂನಲ್ಲಿ ನಮೂದಾಗಿರು ಬಸವರಾಜು ಬಿನ್ ಮಲ್ಲಪ್ಪ ಮತ್ತು ಸುರೇಶ ಬಿನ್ ಮಲ್ಲಪ್ಪ ಎಂದು ನಮೂದಾಗಿದೆ, ಸದರಿಯವರು ಮೈಸೂರು ಮಲ್ಲಪ್ಪ ಅವರ ಕುಟುಂಬಕ್ಕೆ ಸೇರಿದವರು ಎಂದರೆ ಸರಿ. ಅದೇ ರೀತಿ **3** ನೇ ಪುಟದಲ್ಲಿ ಸುರೇಶ ಬಿನ್ ಮಲ್ಲಪ್ಪ ಎಂಬ ಹೆಸರು ನಮೂದಾಗಿರುವುದು ನನ್ನ ತಮ್ಮ ಎಂದರೆ ಸರಿ. ನಿಪಿ-**16** ದಾಖಲೆಯಲ್ಲಿ **1** ನೇ ಪುಟದ **9** ನೇ ಕಲಂನಲ್ಲಿ ನಮೂದಾಗಿರು ಬಸವರಾಜು

ಬಿನ್ ಮಲ್ಲಪ್ಪ ಮತ್ತು ಸುರೇಶ ಬಿನ್ ಮಲ್ಲಪ್ಪ ಎಂದು ನಮೂದಾಗಿದೆ, ಸದರಿಯವರು ಮೈಸೂರು ಮಲ್ಲಪ್ಪ ಅವರ ಕುಟುಂಬಕ್ಕೆ ಸೇರಿದವರು ಎಂದರೆ ಸರಿ. ಅದೇ ರೀತಿ **3** ನೇ ಪುಟದಲ್ಲಿ ಸುರೇಶ ಬಿನ್ ಮಲ್ಲಪ್ಪ ಎಂಬ ಹೆಸರು ನಮೂದಾಗಿರುವುದು ನನ್ನ ತಮ್ಮ ಎಂದರೆ ಸರಿ. ನಿಪಿ-**9** ಮತ್ತು **12**ರ ಪ್ರಕಾರ ರಂತೆ ಮೇಲ್ಮನವಿಯಲ್ಲಿ ನನಗೂ ಭಾಗ ಬರಬೇಕೆಂದು ಆದೇಶ ಆಗಿದೆ. ಆ ರೀತಿ ಆದೇಶ ಆಗಿರುವ ಪ್ರತಿಯನ್ನು ಹಾಜರು ಪಡಿಸಿರುವುದ್ದೇನೆ. ಆ ರೀತಿ ಆದೇಶ ಆಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-**11** ಹಿಂಬರಹವನ್ನು ವಿಲ್ ರಂತೆ ಪ್ರತಿವಾದಿಗೆ ಕ್ರಮಬದ್ಧವಾಗಿ ಖಾತೆ ಆಗಿರುವುದರಿಂದ ತಹಸಿಲ್ದಾರ್ ಅವರು ನೀಡಿರುವ ಹಿಂಬರಹ ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಮದುವೆ ಆಗಿಲ್ಲದಿದ್ದರಿಂದ ನನ್ನ ತಂದೆಯ ಯೋಗಕ್ಷೇಮಗಳನ್ನು ಆತನೇ ನೋಡಿಕೊಂಡಿದ್ದರಿಂದ ದಾವಾ ಆಸ್ತಿಯನ್ನು ನನ್ನ ತಂದೆ ಪ್ರತಿವಾದಿಯ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ತಮ್ಮನ ಮದುವೆಯ ಖರ್ಚಿಗಾಗಿ ಕಬ್ಬಿನ ಬೆಳೆಯನ್ನು ಬಿಟ್ಟಿರುತ್ತಾರೆ. ಸದರಿ ಬೆಳೆಯನ್ನು ಪ್ರತಿವಾದಿಯೇ ಮಾಡುತ್ತಿದ್ದರು. ನನ್ನ ತಂದೆ ಜೀವಂತವಾಗಿ ಇದ್ದಾಗಲೂ ಸಹ ಮತ್ತು ಅವರು ತೀರಿಕೊಂಡ ನಂತರವೂ ಸಹ ಪ್ರತಿವಾದಿಯ ಪರವಾಗಿ ಇದೆ ಎಂದರೆ ಸರಿಯಲ್ಲ. ಆದ್ದರಿಂದ ಅವರ ಹೆಸರಿಗೆ ಖಾತೆ ಬದಲಾಯಿಸಿಕೊಂಡು ಮುಂದುವರೆಸುತ್ತಾ ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ನನಗೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸಹ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಸಲ್ಲಿಸಿರುವ ದಾಖಲೆಗಳನ್ನು ಈ ದಾವೆಗಾಗಿ ಸೃಷ್ಟಿ ಮಾಡಿಕೊಂಡಿರುವ ದಾಖಲೆಗಳು ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಎ ಸಿ ನ್ಯಾಯಾಲಯದ ಮುಂದೆ ಮೇಲ್ಮನವಿ ಇನ್ನು ಚಾಲ್ತಿಯಲ್ಲಿ ಇದೆ, ಇನ್ನು ಆದೇಶ ಆಗಿರುವುದಿಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ